‘ಬಾಲಸಂಸ್ಕಾರ’ ಗ್ರಂಥಮಾಲಿಕೆ : ಖಂಡ ೮

**ಮಕ್ಕಳೇ, ನಾಳಿನ ಆದರ್ಶ ಭಾರತವನ್ನು ನಿರ್ಮಿಸಿರಿ !**

# ರಾಷ್ಟ್ರ ಮತ್ತು ಧರ್ಮ ಪ್ರೇಮಿಗಳಾಗಿರಿ !

(Be devoted to the Nation and Dharma !)

ಕನ್ನಡ (Kannada)


**ಸಂಕಲನಕಾರರು**

**ಹಿಂದೂ ರಾಷ್ಟ್ರ ಸ್ಥಾಪನೆಯ ಉದ್ಘೋಷ ಮಾಡುವ**

**ಸಚ್ಚಿದಾನಂದ ಪರಬ್ರಹ್ಮ ಡಾ. ಜಯಂತ ಬಾಳಾಜಿ ಆಠವಲೆ**

(‘ಸಚ್ಚಿದಾನಂದ ಪರಬ್ರಹ್ಮ’ ಬಿರುದಿನ ಸ್ಪಷ್ಟೀಕರಣವನ್ನು ‘ಪುಟ ೫’ ರಲ್ಲಿ ಓದಿ.)

**ಪೂ. ಸಂದೀಪ ಗಜಾನನ ಆಳಶಿ**

**ಸಹಾಯಕರು**

**ಕು. ಗಾಯತ್ರಿ ಬಾಲಕೃಷ್ಣ ಬುಟ್ಟೆ**



**ಸನಾತನ ಸಂಸ್ಥೆ**

ಸೆಪ್ಟೆಂಬರ್ ೨೦೨೨ ರ ವರೆಗೆ ಸನಾತನದ ೩೫೭ ಗ್ರಂಥಗಳ ಕನ್ನಡ, ಹಿಂದಿ, ಆಂಗ್ಲ, ಮರಾಠಿ, ಗುಜರಾತಿ, ತಮಿಳು, ತೆಲುಗು, ಮಲಯಾಳಂ, ಬಂಗಾಲಿ, ಒರಿಯಾ, ಪಂಜಾಬಿ, ಅಸ್ಸಾಮಿ, ನೇಪಾಳಿ, ಜರ್ಮನ್, ಸರ್ಬಿಯನ್, ಫ್ರೆಂಚ್ ಮತ್ತು ಸ್ಪ್ಯಾನಿಶ್ ಈ ೧೭ ಭಾಷೆಗಳಲ್ಲಿ ೯೦,೭೩,೦೦೦ ಪ್ರತಿಗಳು !

**ಪ್ರಕಾಶಕರು :** ಶ್ರೀ ಸಿದ್ಧೇಶ್ವರ ಧರ್ಮಜಾಗೃತಿ ಸಂಸ್ಥೆ
Shree Siddheshwar Dharmajagruti Sanstha
ಮ.ಸಂ. 2ಬಿ–29ಎ, ಇಂದಿರಾನಗರ, ಕುಕ್ಕಿಕಟ್ಟೆ,
ಉಡುಪಿ 576 101, ಕರ್ನಾಟಕ. ದೂ.ಕ್ರ. : +91 93424 35617
ಇತರ ದೂ.ಕ್ರ. (ಗೋವಾ) : +91 (0832) 2312664
ವಿ–ಅಂಚೆ : granth@sanatan.org

**ಮುಖಪುಟದ ಪರಿಕಲ್ಪನೆ :** ಸೌ. ಜಾಹ್ನವಿ ಶಿಂದೆ ಮತ್ತು ಸೌ. ಯೋಗೇಶ್ರೀ ಘೋಳೆ

**First Edition** : Hanuman Jayanthi, Kaliyug Varsh 5115
(25th April 2013)

**Seventh Reprint** : Deepavali, Kaliyug Varsh 5124
(26th October 2022)

Translated from the original Marathi text 'Rashtra Ani Dharma Premi Vha !'
ಪ್ರಸ್ತುತ ಗ್ರಂಥವು ಹಿಂದಿ ಮತ್ತು ಆಂಗ್ಲ ಭಾಷೆಗಳಲ್ಲೂ ಲಭ್ಯವಿದೆ.

**ಅನುವಾದಕರು** : ಡಾ. ಪ್ರಕಾಶ ಘಾಳಿ
ಶ್ರೀ. ಗಣೇಶ ರಾಜಾರಾಮ ಕಾಮತ್

**ಮುದ್ರಣಸ್ಥಳ** : ಆಮೋದ್ ಗ್ರಾಫಿಕ್ಸ್, ಬೆಂಗಳೂರು – 560 010.

**ದೇಣಿಗೆ ಮೌಲ್ಯ** : ₹ 130/-

**ISBN :** 978-93-82165-48-4 ॐ ಗ್ರಂಥ ಕ್ರ. : 191

© **ಪ್ರಕಾಶಕರು** All rights are reserved. No part of this publication maybe reproduced, stored in a retrieval system or transmitted, in any form or by any means, mechanical, photocopying, recording or otherwise, without prior written permission of the original publisher. Violators will be liable for criminal / civil action.

## ವಿಷಯಸೂಚಿ

೧. ಗ್ರಂಥದ ಸಂಕಲನಕಾರರ ಪರಿಚಯ ೬
೨. ಪಾಲಕರಿಗೆ ಸೂಚನೆ ೮
೩. ಮನೋಗತ ೧೦
೪. ಆಧ್ಯಾತ್ಮಿಕ ಪರಿಭಾಷೆಯಲ್ಲಿನ ವೈಶಿಷ್ಟ್ಯಪೂರ್ಣ ಪ್ರಸ್ತಾವನೆ ! ೧೩

---

## ಅನುಕ್ರಮಣಿಕೆ

(ಕೆಲವು ಮಹತ್ವದ ಅಂಶಗಳನ್ನು '*' ಈ ಗುರುತಿನಲ್ಲಿ ಕೊಡಲಾಗಿದೆ.)

೧. ಮಕ್ಕಳೇ, ರಾಷ್ಟ್ರ ಮತ್ತು ಧರ್ಮದ ಬಗೆಗಿನ ನಮ್ಮ ಕರ್ತವ್ಯಗಳನ್ನು ಅರಿತುಕೊಳ್ಳಿ ! ೧೪
೨. ಮಾತೃಭಾಷಾಭಿಮಾನವು ರಾಷ್ಟ್ರಾಭಿಮಾನ ಮತ್ತು ಧರ್ಮಾಭಿಮಾನದ ಅಡಿಪಾಯವಾಗಿದೆ ! ೨೦
೩. ಸ್ವದೇಶೀಯನ್ನು ಅವಲಂಬಿಸಿ ಮತ್ತು ರಾಷ್ಟ್ರಾಭಿಮಾನವನ್ನು ವೃದ್ಧಿಸಿ ! ೩೪
* ವಿದೇಶಿ ವಸ್ತುಗಳನ್ನು ಉಪಯೋಗಿಸುವುದರಿಂದ ಭಾರತಕ್ಕಾಗುತ್ತಿರುವ ನಷ್ಟ ೩೫
* ಸ್ವದೇಶೀ ವಸ್ತುಗಳನ್ನು ಪುರಸ್ಕರಿಸುವ ರಾಷ್ಟ್ರಪುರುಷರ ಆದರ್ಶವನ್ನಿಡಿ! ೩೬
೪. ರಾಷ್ಟ್ರಾಭಿಮಾನ ಹೆಚ್ಚಿಸಲು ಈ ಕೃತಿಗಳನ್ನೂ ಮಾಡಿ ! ೪೭
* ರಾಷ್ಟ್ರಪುರುಷರ ಚರಿತ್ರೆಗಳನ್ನು ಓದಿ ಮತ್ತು ಅವರ ಆದರ್ಶನ್ನಿಡಿ ! ೪೭
* ರಾಷ್ಟ್ರಧ್ವಜದ ಮತ್ತು ಭಗವಾಧ್ವಜದ ಗೌರವವನ್ನು ಕಾಪಾಡಿ ! ೪೯
* ರಾಷ್ಟ್ರಗೀತೆಗಳ ಗೌರವವನ್ನು ಕಾಪಾಡಿ ! ೫೫
* ಶಿವಾಜಿ ಮಹಾರಾಜರ ಕೋಟೆಗಳಿಗೆ ಪ್ರತ್ಯಕ್ಷ ಭೇಟಿ ನೀಡಿ ! ೫೯
* ಪಠ್ಯಪುಸ್ತಕಗಳಲ್ಲಿನ ಸುಳ್ಳು ಇತಿಹಾಸವನ್ನು ವಿರೋಧಿಸಿ ! ೬೦
* ನಿಜವಾದ ವೈಭವಶಾಲಿ ಇತಿಹಾಸವನ್ನು ಅರಿತುಕೊಳ್ಳಿ ! ೬೧
* ಅಲೆಕ್ಸಾಂಡರ್ ಜಗತ್ತನ್ನು ಬಿಡಿ; ಹಿಂದೂಸ್ಥಾನ ವಿಜೇತನೂ ಆಗಿರಲಿಲ್ಲ! ೬೩
* ವೈಜ್ಞಾನಿಕ ಸಂಶೋಧನೆಗಳ ಜನಕರಾದ ಹಿಂದೂಗಳ ಪೂರ್ವಜರು ! ೬೪

**೫. ಧರ್ಮಪ್ರೇಮವನ್ನು ಹೆಚ್ಚಿಸಿ ಮತ್ತು ಧರ್ಮಾಭಿಮಾನಿಗಳಾಗಿ ! ೬೫**

**೬. ರಾಷ್ಟ್ರಹಿತ ಮತ್ತು ಧರ್ಮಹಿತಕ್ಕಾಗಿ ಈ ಪ್ರಯತ್ನಗಳನ್ನೂ ಮಾಡಿ ! ೮೯**

* ಪಟಾಕಿಗಳಿಂದಾಗುವ ವ್ಯಕ್ತಿ, ರಾಷ್ಟ್ರ ಮತ್ತು ಧರ್ಮಹಾನಿ ತಡೆಗಟ್ಟಿ ! ೯೨

* ನಿಯಮಿತವಾಗಿ ವ್ಯಾಯಾಮ ಮಾಡಿ, ಹಾಗೆಯೇ ಸ್ವರಕ್ಷಣೆಯ ತರಬೇತಿಯನ್ನೂ ಪಡೆಯಿರಿ ! ೯೪

* ಅಂತರ್ಜಾಲವನ್ನು ಯೋಗ್ಯ ರೀತಿಯಲ್ಲಿ ಬಳಸಿ ! ೯೬

**೭. ರಾಷ್ಟ್ರರಕ್ಷಣೆ ಮತ್ತು ಧರ್ಮಜಾಗೃತಿಯ ಚಳುವಳಿಗಳಲ್ಲಿ ಪಾಲ್ಗೊಳ್ಳಿ ! ೯೮**

**卐 ಸಂಕಲನಕಾರರ ವೈಜ್ಞಾನಿಕ ದೃಷ್ಟಿಕೋನ ಮತ್ತು ಇತರ ಮಾಹಿತಿ ೧೦೫**

**ಟಿಪ್ಪಣಿ** ಪ್ರಸ್ತುತ ಗ್ರಂಥದ ಮರಾಠಿ ಆವೃತ್ತಿಯಲ್ಲಿ ಗ್ರಂಥದ ಸಹಾಯಕರಾಗಿರುವ ಕು. ಗಾಯತ್ರಿ ಬಾಲಕೃಷ್ಣ ಬುಟ್ಟೆ ಇವರನ್ನು ‘ಸಂಕಲನಕಾರ’ರಾಗಿ ಉಲ್ಲೇಖಿಸಲಾಗಿದೆ.

## ಡಾ. ಜಯಂತ ಆಠವಲೆಯವರ ಹೆಸರಿಗೆ ಸೇರಿಸುವ ‘ಸಚ್ಚಿದಾನಂದ ಪರಬ್ರಹ್ಮ’ ಎಂಬ ಬಿರುದಿನ ಕುರಿತಾದ ವಿವೇಚನೆ !

‘೧೩.೭.೨೦೨೨ ರಿಂದ ‘ಸಪ್ತರ್ಷಿ ಜೀವನಾಡಿಪಟ್ಟಿ’ಯ ವಾಚನದ ಮಾಧ್ಯಮದಿಂದ ಸಪ್ತರ್ಷಿಗಳ ಆಜ್ಞೆಯಂತೆ ಪರಾತ್ಪರ ಗುರು ಡಾ. ಆಠವಲೆಯವರನ್ನು ‘ಸಚ್ಚಿದಾನಂದ ಪರಬ್ರಹ್ಮ ಡಾ. ಜಯಂತ ಬಾಳಾಜಿ ಆಠವಲೆ’ ಎಂದು ಸಂಬೋಧಿಸಲಾಗುತ್ತಿದೆ. ‘ಸಚ್ಚಿದಾನಂದ ಪರಬ್ರಹ್ಮ’ ಎಂಬ ಬಿರುದಿನಿಂದ ಸಂಬೋಧಿಸುವುದರಿಂದ ‘ಪರಾತ್ಪರ ಗುರು ಡಾ. ಆಠವಲೆಯವರಲ್ಲಿರುವ ಈಶ್ವರೀ ತತ್ತ್ವದಿಂದ ಎಲ್ಲರಿಗೂ ಲಾಭವಾಗಬೇಕು’ ಎಂಬುದು ಸಪ್ತರ್ಷಿಗಳ ಆಜ್ಞೆಯ ಉದ್ದೇಶವಾಗಿದೆ. (೧೩.೭.೨೦೨೨ ಕ್ಕೂ ಮೊದಲು ಸನಾತನದ ಗ್ರಂಥಗಳಲ್ಲಿ ಸಚ್ಚಿದಾನಂದ ಪರಬ್ರಹ್ಮ ಡಾ. ಆಠವಲೆಯವರನ್ನು ‘ಪ.ಪೂ. [ಪರಮ ಪೂಜ್ಯ]’ ಮತ್ತು ‘ಪರಾತ್ಪರ ಗುರು’ ಎಂಬ ಬಿರುದುಗಳಿಂದ ಸಂಬೋಧಿಸಲಾಗಿದೆ.)

**– (ಪೂ.) ಶ್ರೀ. ಸಂದೀಪ ಆಳಶಿ, ಸನಾತನ ಆಶ್ರಮ, ಗೋವಾ (೨೪.೭.೨೦೨೨)**

## ವಿಷಯಸೂಚಿಯಲ್ಲಿನ ಕ್ರಮಾಂಕ ೩

### ಮನೋಗತ




ಸೀತಾ ರಾಮಚಂದ್ರರ ಕರ್ತವ್ಯದಕ್ಷ ಭೂಮಿ ।

ಇಲ್ಲಿ ಪರಾಕ್ರಮದ ರಾಮಾಯಣಗಳು ಘಟಿಸಬೇಕು ।

ಹಿಮಾಲಯ ಪರ್ವತಗಳ ಶಿರ ಇನ್ನೂ ಎತ್ತರವಾಗಬೇಕು ।

ಸೂರ್ಯಚಂದ್ರರಿರುವ ವರೆಗೆ ಭಾರತ
ಸ್ವತಂತ್ರವಾಗಿರಬೇಕು ॥



ಕವಿವರ್ಯ ಗ.ದಿ. ಮಾಡಗೂಳಕರರ ಸ್ವಾತಂತ್ರ್ಯದ ಬಗೆಗಿನ ಈ ಭಾವನೆಯು ಎಷ್ಟು ಉದಾತ್ತವಾಗಿದೆ ! ಸ್ವಾತಂತ್ರ್ಯಪೂರ್ವ ಕಾಲದಲ್ಲಿ ರಾಷ್ಟ್ರ ಪುರುಷರು ಮತ್ತು ಕ್ರಾಂತಿಕಾರಿಗಳು ತಮ್ಮ ಪ್ರಾಣವನ್ನು ದೇಶಕ್ಕಾಗಿ ಅರ್ಪಿಸದಿದ್ದರೆ, ಇಂದು ನಾವು 'ಸ್ವತಂತ್ರ'ರೆಂದು ಗೌರವದಿಂದ ಜೀವಿಸಬಹುದಾಗಿತ್ತೇ ?

'ಇಂದಿನ ಮಕ್ಕಳೇ, ದೇಶದ ಭವಿಷ್ಯವಾಗಿದ್ದಾರೆ' ಎಂದು ಹೇಳುತ್ತಾರೆ. ಇಂದಿನ ಮಕ್ಕಳ ಬಾಯಿಯಲ್ಲಿ ಯಾವ ಹಾಡುಗಳಿರುತ್ತವೆ ಎಂಬುದರ ಮೇಲೆ ದೇಶದ ಭವಿಷ್ಯ ಅವಲಂಬಿಸಿರುತ್ತದೆ ! ಹಿಂದೆ ಮಕ್ಕಳ ಬಾಯಿಯಲ್ಲಿ 'ದೇವರ ಶ್ಲೋಕ'ಗಳಿರುತ್ತಿದ್ದವು, ಆದರೆ ಈಗ 'ಪಾಪ್' ಹಾಡುಗಳಿರುತ್ತವೆ ! ಇಂದು ವ್ಯಾಯಾಮಶಾಲೆಗಳು ಮುಚ್ಚುತ್ತಿದ್ದು ಎಲ್ಲೆಡೆ 'ಡ್ಯಾನ್ಸ್ ಕ್ಲಾಸ್'ಗಳು ಪ್ರಾರಂಭವಾಗುತ್ತಿವೆ ! ಮಕ್ಕಳಿಗೆ ರಾಷ್ಟ್ರಪುರುಷರು ಮತ್ತು ಕ್ರಾಂತಿಕಾರಿಗಳು ಆದರ್ಶವೆನಿಸದೇ, ಚಲನಚಿತ್ರ ನಟ-ನಟಿಯರು ಮತ್ತು ಕ್ರೀಡಾಪಟುಗಳು ಆದರ್ಶವೆನಿಸುತ್ತಿದ್ದಾರೆ ! ರಾಷ್ಟ್ರ ಮತ್ತು ಧರ್ಮದ ಬಗ್ಗೆ ನಿಜವಾಗಿ ನಮಗೆಷ್ಟು ಅಭಿಮಾನವಿದೆ ? ಕೇವಲ ಶಾಲೆಯಲ್ಲಿ ರಾಷ್ಟ್ರಗೀತೆಯನ್ನು ಹಾಡುವುದರಿಂದ ಮತ್ತು ಹಬ್ಬಹರಿದಿನಗಳಲ್ಲಿ ದೇವರಿಗೆ ನಮಸ್ಕರಿಸುವುದರಿಂದ ಈ ಅಭಿಮಾನ ನಿರ್ಮಾಣವಾಗುವುದಿಲ್ಲ. ಅದಕ್ಕಾಗಿ ಮನಸ್ಸಿನಲ್ಲಿ ರಾಷ್ಟ್ರ ಮತ್ತು ಧರ್ಮದ ಬಗ್ಗೆ ಪ್ರೇಮ ನಿರ್ಮಾಣವಾಗಬೇಕಾಗುತ್ತದೆ.

ಮಕ್ಕಳೇ, ಕೇವಲ ಉತ್ತಮ ಶಿಕ್ಷಣವನ್ನು ಪಡೆದುಕೊಂಡು ಉತ್ತಮ ನೌಕರಿಯನ್ನು ಮಾಡಿ, ಪ್ರಾಮಾಣಿಕತನದಿಂದ ಜೀವನವನ್ನು ಜೀವಿಸಿದರೆ, ನಾವು 'ಆದರ್ಶ ನಾಗರಿಕ'ರಾಗುತ್ತೇವೆ, ಎಂದಿರುವುದಿಲ್ಲ. ಇಂದು ಇಷ್ಟು

ವರ್ಷಗಳ ನಂತರವೂ ಛತ್ರಪತಿ ಶಿವಾಜಿ ಮಹಾರಾಜರಂತಹ ರಾಷ್ಟ್ರ ಪುರುಷರು ಮತ್ತು ಸಮರ್ಥ ರಾಮದಾಸಸ್ವಾಮಿಗಳಂತಹ ಧರ್ಮಪುರುಷರು ಎಲ್ಲರ ಸ್ಮರಣೆಯಲ್ಲಿದ್ದಾರೆ; ಏಕೆಂದರೆ ಅವರು ಆದರ್ಶರಾಗಿದ್ದರು. ಅವರು ರಾಷ್ಟ್ರ ಮತ್ತು ಧರ್ಮಕ್ಕಾಗಿ ಜೀವಿಸಿದ್ದರಿಂದ ಆದರ್ಶರಾಗಿದ್ದಾರೆ. ಮಕ್ಕಳೇ, ನಿಮಗೂ ಇತರರು 'ಆದರ್ಶ'ವೆಂದು ಹೇಳಬೇಕು ಎಂದೆನಿಸುತ್ತದೆಯಲ್ಲವೇ ? ಹಾಗಾದರೆ ಅದಕ್ಕಾಗಿ ರಾಷ್ಟ್ರ ಮತ್ತು ಧರ್ಮಪ್ರೇಮಿಯಾಗಬೇಕು. ರಾಷ್ಟ್ರ ಮತ್ತು ಧರ್ಮಪ್ರೇಮಿಯಾಗಲು ಸರಳವಾದ ಸುಲಭ ಮಾರ್ಗದರ್ಶನವನ್ನು ಈ ಗ್ರಂಥದಲ್ಲಿ ಮಾಡಲಾಗಿದೆ.

ಇಂದು ನಮ್ಮ ದೇಶದಲ್ಲಿ ಭಯೋತ್ಪಾದನೆ, ಭ್ರಷ್ಟಾಚಾರ, ದಾರಿದ್ರ್ಯ, ನಿರುದ್ಯೋಗ, ಮಹಿಳೆಯರ ಮೇಲಿನ ಅತ್ಯಾಚಾರ ಮುಂತಾದ ಅನೇಕ ಸಮಸ್ಯೆ ಗಳಿವೆ. ನೇತಾರರು ಭಾರತವನ್ನು ಅಮೇರಿಕಾ, ಚೀನಾದಂತೆ ಶಕ್ತಿಶಾಲಿ ಸಮೃದ್ಧ ದೇಶವನ್ನು ಮಾಡುವ ಘೋಷಣೆಗಳನ್ನು ಮಾಡುತ್ತಾರೆ. ನಾವೂ ಅಂತಹ ಕನಸನ್ನು ಕಾಣುತ್ತೇವೆ. ಅಮೇರಿಕಾ ಮತ್ತು ಚೀನಾ ಶಕ್ತಿಶಾಲಿ ಮತ್ತು ಸಮೃದ್ಧ ದೇಶಗಳಾಗಿದ್ದರೂ ಈ ದೇಶಗಳಲ್ಲಿ ಕಳ್ಳತನ, ಭ್ರಷ್ಟಾಚಾರ, ಗೂಂಡಾಗಿರಿ, ದ್ರೋಹ, ಮೋಸ ಇತ್ಯಾದಿಗಳು ಇದ್ದೇ ಇವೆ. ಅಲ್ಲಿ ಹಣ ಮತ್ತು ಬಲವಿದೆ; ಆದರೆ ಆನಂದವಿಲ್ಲ ! ನಮಗೆ ಎಂತಹ ರಾಷ್ಟ್ರ ಬೇಕು ? ಸಮರ್ಥ ರಾಮದಾಸ ಸ್ವಾಮಿಗಳ ಆಶೀರ್ವಾದದಿಂದ ಛ. ಶಿವಾಜಿ ಮಹಾರಾಜರು ಸ್ಥಾಪಿಸಿದ 'ಹಿಂದವೀ ಸ್ವರಾಜ್ಯ'ದಂತಹ ರಾಷ್ಟ್ರ ಬೇಕು.

ಕಾಡು, ನಾಡು, ಎಲ್ಲೆಲ್ಲಿಯೂ ಆನಂದವೋ ಆನಂದ ! ಎಲ್ಲರಿಗೂ ಆನಂದವನ್ನು ಕೊಡುವ ರಾಜ್ಯವನ್ನು ಶಿವಾಜಿ ಮಹಾರಾಜರು ಹೇಗೆ ಸ್ಥಾಪಿಸಿದರು ? ಬಾಹುಬಲವು ಒಂದು ಕಾರಣವಾಗಿದ್ದರೆ, ಧರ್ಮಬಲವು ಇನ್ನೊಂದು ಕಾರಣವಾಗಿದೆ. ಸಮರ್ಥ ರಾಮದಾಸ ಸ್ವಾಮಿಗಳಂತಹ ಸಂತರು ಮಹಾರಾಜರಿಗೆ ಆಶೀರ್ವಾದ ನೀಡಿದರು; ಏಕೆಂದರೆ ಅವರು ಧರ್ಮ ಕ್ಕನುಸಾರ ನಡೆದುಕೊಳ್ಳುತ್ತಿದ್ದರು. ಮಹಾರಾಜರು ಧರ್ಮಕ್ಕನುಸಾರ ನಡೆದು ಕೊಳ್ಳುತ್ತಿದ್ದುದರಿಂದ ಅವರ ಪ್ರಜೆಗಳೂ ಧರ್ಮದಂತೆ ನಡೆದುಕೊಳ್ಳುತ್ತಿದ್ದರು. ಇದರ ಪರಿಣಾಮವೆಂದು 'ಹಿಂದವೀ ಸ್ವರಾಜ್ಯ'ವು ಎಲ್ಲ ದೃಷ್ಟಿಯಿಂದ ಆದರ್ಶ ಮತ್ತು ಆನಂದದಿಂದ ಕೂಡಿದ ರಾಜ್ಯವಾಗಿತ್ತು.

ಮಕ್ಕಳೇ, ನೀವೂ ರಾಷ್ಟ್ರಪುರುಷರು, ಸಂತರು ಮತ್ತು ರಾಮ-ಕೃಷ್ಣರಂತಹ ದೇವತೆಗಳ ಆದರ್ಶವನ್ನು ಮುಂದಿಟ್ಟುಕೊಂಡರೆ, ಧರ್ಮಾಚರಣೆ ಮಾಡಿದರೆ, ನೈತಿಕ ಮೌಲ್ಯಗಳನ್ನು ಜೋಪಾನ ಮಾಡಿ ಶಿಕ್ಷಣ ಪಡೆದರೆ ಮತ್ತು ಆ ಶಿಕ್ಷಣವನ್ನು ರಾಷ್ಟ್ರ ಮತ್ತು ಧರ್ಮದ ಸೇವೆಗಾಗಿ ವಿನಿಯೋಗಿಸಿದರೆ, ಖಂಡಿತವಾಗಿ ಭಾರತದಲ್ಲಿ ಪುನಃ 'ಹಿಂದವಿ ಸ್ವರಾಜ್ಯ' (ಆದರ್ಶ ರಾಜ್ಯ) ಸ್ಥಾಪನೆಯಾಗುವುದು. ಹೀಗೆ 'ಸುರಾಜ್ಯವನ್ನು ಸ್ಥಾಪಿಸುವುದೇ' ನಿಮ್ಮ ನಿಜವಾದ 'ಕರಿಯರ್' ಆಗಿದೆ, ಎಂಬುದನ್ನು ಗಮನದಲ್ಲಿಡಿ !

ಈ ಗ್ರಂಥವನ್ನು ಓದಿ ಎಲ್ಲರೂ ಧರ್ಮಾಚರಣಿಗಳು ಮತ್ತು ರಾಷ್ಟ್ರಭಕ್ತರಾಗಿ ಅವರಿಗೆ ರಾಷ್ಟ್ರ ಮತ್ತು ಧರ್ಮದ ಬಗೆಗಿನ ಕರ್ತವ್ಯವನ್ನು ಪಾಲಿಸಲು ಪ್ರೇರಣೆಯು ದೊರೆಯಲಿ, ಎಂದು ಶ್ರೀ ಗುರುಚರಣಗಳಲ್ಲಿ ಪ್ರಾರ್ಥನೆ ! – **ಸಂಕಲನಕಾರರು**


**ಸನಾತನದ ಬಾಲಸಂಸ್ಕಾರ ಮಾಲಿಕೆಯ ಕಿರುಗ್ರಂಥ !**

**ಟಿ.ವಿ., ಮೊಬೈಲ್ ಮತ್ತು ಇಂಟರ್‌ನೆಟ್‌ನ ದುಷ್ಪರಿಣಾಮಗಳಿಂದ ಮಕ್ಕಳನ್ನು ರಕ್ಷಿಸಿ !**

- ಆಧುನಿಕ ಪ್ರಸಾರಮಾಧ್ಯಮಗಳಿಂದ ನಿರ್ಮಾಣವಾಗಿರುವ ಭಯಾನಕ ಕೌಟುಂಬಿಕ ಮತ್ತು ಸಾಮಾಜಿಕ ಸ್ಥಿತಿ
- ಟಿ.ವಿ., ಮೊಬೈಲ್ ಮತ್ತು ಇಂಟರ್‌ನೆಟ್‌ನ ಸಂದರ್ಭದಲ್ಲಿ ಪಾಲಕರು ಮತ್ತು ಶಿಕ್ಷಕರು ತಮ್ಮ ಜವಾಬ್ದಾರಿಯನ್ನು ಹೇಗೆ ನಿಭಾಯಿಸಬೇಕು ?

**ಸನಾತನದ ಗ್ರಂಥಕಾರ್ಯದಲ್ಲಿ ಪಾಲ್ಗೊಂಡು ಸಮಷ್ಟಿ ಸಾಧನೆ ಮಾಡಿ !**

- ಮರಾಠಿ ಭಾಷೆಯಲ್ಲಿನ ಗ್ರಂಥಗಳನ್ನು ಕನ್ನಡ ಭಾಷೆಗೆ ಅನುವಾದ ಮಾಡುವುದು
- ಗ್ರಂಥದ ರಚನೆಯನ್ನು 'ಇನ್‌ಡಿಸೈನ್' ಎಂಬ ಗಣಕ ತಂತ್ರಾಂಶದಲ್ಲಿ ಮಾಡುವುದು

**ಸಂಪರ್ಕಿಸಿ :** ೯೩೪೨೪ ೩೫೬೧೭ kannada.granth@gmail.com